ದಸ್ತಾವೇಜಿನ ನಂಬರ್ ಮತ್ತು ಸಬ್ ರಿಜಿಸ್ಟ್ರರ್ ಆಫೀಸ್ ಹೆಸರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟರ್ ಬೈಸ್ಟೊಂಡ ತಾರೀಖು.	ರಿಜಿಸ್ಟರ್ ಮಾಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಮೊಗಡಿ ತಾಲ್ಲೂಕು ಸಬ್ ರಿಜಿಸ್ಟರ್ ಆಫೀಸ್ 2ನೇ ಬುಕ್ಕು ನಂಬರ್ 1	ತಿರುಮಲೆಯಲ್ಲಿ ಯಿರುವ ತಿರುಮಲ ತಾತಾಚಾರ್ಯ ಮಗ ವೆಂಕಟದೇಶಿಕಾಚಾರ್ಯ	ಅದೇವೂರಲ್ಲಿರುವ ಶ್ರೀನಿವಾಸರಂಗಯ್ಯನ ಮಗ ಗೌರೀರಂಗಚಾರ್ಯ	1881ನೇ ಇ ಸವಿ ಅಕ್ಟೋಬರ್ ತಾ| 8	1881ನೇ ಇ ಸವಿ ಮಾರ್ಚಿ ತಾ| 21	ತಿರುಮಲೆ ಗ್ರಾಮದ ಸರ್ವೆ 6ದೇ ಬೀಜವರೀ ಬೀಂ ಹತ್ತುಕೊಳಗವುಳ್ಳ ಜಮೀನು ಆಧಾರಮಾಡಿ ೧೦೦ ರೂಪಾಯಿ ತೆಗದುಕೊಂಡು ಬಡ್ಡಿಗಾಗಿ ವರುಷಕ್ಕೆ ೨ ಕೊಂಡಗ ಭತ್ತಾ ಬಡ್ಡಿ ಕೊಡುವದಾಗಿ
ಆನೇಕಲ್ ತಾಲ್ಲೂಕು ಸಬ್ ರಿಜಿಸ್ಟರ್ ಆಫೀಸ್ 1ನೇ ಬುಕ್ಕು 219ನೇ ನಂ.	ಕೂತಗೊಂಡಹಳ್ಳಿಲ್ಲಿ ಇರುವ ವೆಂಕಟಮ್ಮ	ತಿಂಬ್ಲುನಲ್ಲಿ ಇರುವ ಸೋಣಪ್ಪ	1884ನೇ ಇ ಸವಿ ಅಕ್ಟೋಬರ್ 14	1884ನೇ ಇ ಸವಿ ಅಕ್ಟೋಬರ್ 14	ತಿಂಬ್ಲುಗ್ರಾಮದ ಬಳಿಯಿರುವ ಖುಷ್ಕಿ ಬಾ|| ವಹಾರ ಸಹಿತ ೧೦ ಸ್ಥಳಗಳು ಕ್ರಯ ೫೫೫ ಚರಸ್ವತ್ತು ಕ್ರಯ ೨೫೫ ಜುಮ್ಲೂ ೬೦೦ ರೂಪಾಯಿನ ಸ್ವತ್ತುಗಳ ಮೇಲೆ ತನಿಗೆ ಹಕ್ಕು ಯೀನು ಯಿಲ್ಲಾ ಜೀವನಾಂಶಕ್ಕಾಗಿ ೫೫ ರೂಪಾಯಿ ತೆಗದುಕೊಂಡು ಯಿರುವಕ್ಕಾಗಿ ಖುಲಾಸೆ ಪತ್ರ.

ಎ. ಹೆಚ್. ಮೆಕೆಂಟೈರ್
ರಿಜಿಸ್ಟ್ರರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 26ನೇ ಜನವರೀ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟು ಮಜಕೂರು 8 ತಾಲ್ಲೂಕುಗಳಲ್ಲಿ ಸರಕಾರದ ಜಮೀನ್ ವೊಳಗೆ ಯಿರತಕ್ಕ ಕುರಂಗದ ಕಲ್ಲುಗಳನ್ನ ಜಮಾಯಿಸತಕ್ಕ ಹಕ್ಕನ್ನು ಸ್ಯ 1887—88ನೇ ಇಸವಿ ಸರ್ವಜಿತು ಸಂವತ್ಸರಕ್ಕೆ ಮಾತ್ರ ಯಿಜಾರೆ ಕೊಡಲು ಸ್ಯ 1887ನೇ ಇಸವಿ ಮಾರ್ಚಿ ತಾರೀಖು 8ರಲ್ಲು ದಿವಿ 11 ಘೆಂಟೆ ಲಾಗಾಯಿತು 5 ಘೆಂಟೆವರಿಗೆ ತುಮಕೂರು ಡಿಸ್ಟ್ರಿಕ್ಟು ಆಫಿಸ್ ಬಳಿ ಡೆಪ್ಯೂಟಿಕಮ್ಮಿಷನರ್ ಸಾಹೇಬರವರ ರೂಬರೂಬ್ ಅಥವಾ ಹಾಜರಿರುವ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರ ರೂಬರೂಬು ಹರಾಜು ಮಾಡಲ್ಪಡುವದು.

ಷರತ್ತುಗಳು.

1. ಹರಾಜು ಕೈದಾದ ಕೂಡ್ಲೆ ಆಖೈರು ಸವಾಲ್‌ದಾರನು ಕೇಕಡ 25 ರೂಪಾಯಿ ಮೇರಿಗೆ ನಗದು ಠೇವಣಿಯನ್ನು ಇಡಬೇಕು ಹರಾಜು ದಿವಾಣಸಾಹೆಬರವರಿಂದ ಮಂಜೂರಾದ ವಹನೇ 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರು ಮಾಡಬೇಕು. ಹಾಗೆ ಹಾಜರು ಮಾಡದೆ ತಪ್ಪಿದರೆ ಪುನಹ ಹರಾಜು ಮಾಡಲ್ಪಟ್ಟು ನಷ್ಟಬಂದ ಮೊಬಲಗಿಗೆ ಮೊದಲಿನ ಚಡ್ಡೆ ಸವಾಲ್‌ದಾರನನ್ನು ಗುರಿಮಾಡಲಾದೀತು. ಮತ್ತು ಠೇವಣಿಯನ್ನು ಸರಕಾರಕ್ಕೆ ಕೇರಿಸಿಕೊಳ್ಳಲಾದೀತು.

2. ಕುರಂಗದ ಕಲ್ಲುಗಳನ್ನು ತೆಗಿಯುವ ವುದಕ್ಕೆ ಭೂಮಿ ಸಾಗುವಳಿಗೆ ನಾಲಾಯಕು ಆಗುವಂತೆ ಮಾಡಕೂಡದು ಗುಂಡಿಗಳನ್ನು ಯಿಜಾರೆದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯಲ್ಲಿ ಕುರಂಗದಕಲ್ಲುಗಳನ್ನು ಹಿಡುವಳೀದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಖಂಜರು ಭೂಮಿಗಳನ್ನು ಹುಲ್ಲುಬನ್ನಿ ಮತ್ತು ಸಾಗುವಳಿಗೆ ಕೊಡಲಾದೀತು ಹಾಗೆ ಕೊಡೋಣದರಿಂದ ಕುರಂಗದಕಲ್ಲು ಇಜಾರೆದಾರನಿಗೇನಾದರು ನಷ್ಟವಾದರೆ ಅದಕ್ಕೆ ಸರಕಾರದವರು ಜವಾಬದಾರರಲ್ಲಾ.

5. ಹರಾಜು ಮೊಬಲಗಿನ ಮೇಲೆ ಶೇಕಡಾ 6—4—0 ರೂಪಾಯಿ ಮೇರೆ ಲೋಕಲ್ ಸೆಸ್ಸನ್ನೂ ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ಹೆಚ್ಚು ತಪಸೀಲ್ ತಿಳಿಯಬೇಕಾಗಿದ್ದರೆ ಡಿಸ್ಟ್ರಿಕ್ಟು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಪಿ. ಯ್. ಕೃಷ್ಣಮೂರ್ತಿ,
ಛಾರ್ ಡೆಪ್ಯೂಟಿ ಕಮ್ಮಿಷನರ್.